ಉಪಾಯವೂ ಹೊಳೆದಿದೆ. ಊರ ಕೆರೆಯಲ್ಲಿ ಮೀನು ಹಿಡಿದು ಅದನ್ನು ಮಾರುತ್ತಾಳೆ. ಹೆಚ್ಚು ಮೀನು ಮಾರುವುದರಿಂದ ಹೆಚ್ಚು ಹಣ ಗಳಿಸಬಹುದಾದ್ದರಿಂದ ಸಮಯ ಸಿಕ್ಕಾಗಲೆಲ್ಲ ಆಕೆ ಮೀನುಗಾರಿಕೆ ಮಾಡುತ್ತಾಳೆ. ಅಂದಹಾಗೆ, ಅವಳ ಆ ಊರಿಗೆ ಪ್ರವೇಶವಿರುವುದು ಕಂಪ್ಯೂಟರ್ ಪರದೆಯ ಮೂಲಕ. ಇತ್ತೀಚಿನ ಒಂದೆರಡು ಪ್ರಸಂಗದಲ್ಲಿ ಅವಳು, ಗೌರೀಪೂಜೆಯ ಕುಂಕುಮಕ್ಕೆ ಹೋದಾಗ ಪಡೆದ ದಕ್ಷಿಣೆಯ ಹಣವನ್ನು ಅಮ್ಮನಿಗೆ ನೀಡಿದ್ದಳು. ನಿನಗೇಕೆ ಬೇಡವೆಂದು ಕೇಳಿದರೆ, 'ನನ್ನ ಹತ್ತಿರ ತುಂಬಾ ಹಣವಿದೆ' ಎಂದಿದ್ದಳು. ನಾವು ಆಕೆಯ ಮಾತನ್ನು ಹುಡುಗಾಟಿಕೆ ಎಂದು ತಿಳಿದು ಅಲಕ್ಷಿಸಿದ್ದೆವು.

ಇನ್ನೂ ಮುಂದಕ್ಕೆ, ವರ್ಚುಅಲ್ ಲೋಕದಲ್ಲಿ ಜಾಗಿಂಗ್ ಮಾಡಿಯೂ ತೂಕ ಇಳಿಸಬಹುದಾದ, ಅಲ್ಲಿ ತಿಂದು ಇಲ್ಲಿ ಹಸಿವನ್ನು ನೀಗಿಸಿಕೊಳ್ಳಬಹುದಾದ ದಿನಗಳೂ ಬರಬಹುದು. ಅದೇನೇ ಆದರೂ ಆ ಪ್ರಪಂಚದಲ್ಲಿ ಸ್ಪರ್ಶದ ಮಿಡಿತವಿಲ್ಲ. ತರಹೇವಾರಿ ನಾಯಿಯನ್ನು ಸಾಕಬಹುದು, ಆದರೆ ಅದರ ಮೈಯ ರೋಮವನ್ನು ಸವರುವ ಅನುಭೂತಿ ಸಿಗಲು ಸಾಧ್ಯವೇ? ಇತ್ಯಾದಿಗಳನ್ನೆಲ್ಲಾ ನಮ್ಮ ಸಮಾಧಾನಕ್ಕೆ ನಾವು ಕೇಳಿಕೊಳ್ಳಬಹುದು. ಅಲ್ಲಿ ಕೂಡಿಕೆ ಮಾಡಿ ಇಲ್ಲಿ ಬಸಿರಾಗುವ ಸೌಲಭ್ಯವನ್ನೂ ಒದಗಿಸಬಲ್ಲ ಆ ಶಕ್ತಿಗೆ ಸ್ಪರ್ಶವೊಂದನ್ನು ಸೃಷ್ಟಿಸಿಕೊಡಲು ಸಾಧ್ಯವಿಲ್ಲವೇ? ಖಂಡಿತ ಇದೆ. ಆದರೆ, ನಮಗೆ ಅದರ ಅಗತ್ಯವಿದೆಯೇ ಎಂಬುದು ಪ್ರಶ್ನೆ. ದಿನದ ಮೂರೂ ಹೊತ್ತು ಯಂತ್ರಗಳ ಜೊತೆಗೇ ಕಳೆದು ಯಂತ್ರವೇ ಆಗಿಹೋಗಿರುವ ಮನಕ್ಕೆ ಸ್ಪರ್ಶದ ಹಂಗಿದ್ದೀತೇ?

ಈ ಸಂದರ್ಭದಲ್ಲಿ, ವಿಜ್ಞಾನಿ ಐನ್‌ಸ್ಟೀನ್ ಹೇಳಿದ, **Reality is merely an illusion, albeit a very persistent one** ಎನ್ನುವ ಮಾತು ಹೊಸ ಅರ್ಥವನ್ನೇ ಸೂಚಿಸುತ್ತದೆ. ಇಸ್ರೇಲೀ ಸಂಶೋಧಕ ಯುವಲ್ ಹರಾರಿ ತನ್ನ 'ಹೋಮೋ ಡಿಅಸ್; ಅ ಬ್ರೀಫ್ ಹಿಸ್ಟರಿ ಆಫ್ ಟುಮಾರೋ' ಎನ್ನುವ ಕೃತಿಯಲ್ಲಿ – 'ಭವಿಷ್ಯದಲ್ಲಿ ಈ ಮಿಥ್ಯಾವಾಸ್ತವ ಜಗತ್ತಿನ ಸಾಧ್ಯತೆ ಹಾಗೂ ಆಯ್ಕೆಗಳು ಅದೆಷ್ಟು ಪ್ರಬಲ ಹಾಗೂ ಅಗಾಧವಾಗಿರುತ್ತವೆಯೆಂದರೆ, ಈ ಕುಬ್ಜ ನಿಜ ಜಗತ್ತಿನ ಬದುಕು ನಮ್ಮ ಆದ್ಯತೆಯೇ ಆಗಿರುವುದಿಲ್ಲ' ಎನ್ನುತ್ತಾನೆ. ನಾನು ಕಾಣುತ್ತಿರುವುದೆಲ್ಲ ಒಂದು ಕನಸೇ? ನಾನು ಈಗಷ್ಟೇ ಮಾತನಾಡಿದ ವ್ಯಕ್ತಿ ಆ ಕನಸಿನ ಪಾತ್ರವೇ ಆಗಿರಬಹುದೇ? ನನ್ನ ಸುತ್ತಲಿನದೆಲ್ಲ ಯಾವುದರದ್ದೋ ಪ್ರತ್ಯನುಕರಣೆಯೇ? ನಾನು ಅನುಭವಿಸುತ್ತಿರುವುದೆಲ್ಲ ನನ್ನ ಮೆದುಳು ಯಾವುದೋ ಎಲೆಕ್ಟ್ರಾನಿಕ್ ತರಂಗಗಳ ಮೂಲಕ ಉದ್ದೀಪನಗೊಂಡು ಕಾಣುತ್ತಿರುವುದೇ ಆಗಿರಬಹುದೇ? ಹೀಗಾಗಿಯೇ ನನ್ನದು ನಿಜ ಜಗತ್ತೇ ಅಥವಾ ಮಿಥ್ಯಾಸ್ಮೃತಿಯ ಬದುಕೇ ಎಂಬುದನ್ನು ಪ್ರತ್ಯೇಕಿಸಿ ನೋಡಲಾಗುತ್ತಿಲ್ಲವೇ? ಹೀಗೆ, ಪ್ರತಿ ಮನುಷ್ಯನೂ ಇಂತಹ ಸಂಶಯ ಕೂಪದಲ್ಲಿ ಬಿದ್ದು ಒದ್ದಾಡುವ ದಿನಗಳು ಈ ವೈಜ್ಞಾನಿಕ ಸಿದ್ಧಾಂತದಡಿಯಲ್ಲಿ ಹೆಚ್ಚು ದೂರವಿಲ್ಲ ಅನ್ನುತ್ತಾನೆ ಹರಾರಿ. ಹಾಗೇ ಮುಂದುವರಿದು – 'ಅಥವಾ ಅದು ಈಗಾಗಲೇ ಆಗಿಬಿಟ್ಟಿದೆಯೇ?' ಎನ್ನುವ ಸಂದೇಹವನ್ನೂ ವ್ಯಕ್ತಪಡಿಸುತ್ತಾನೆ.

ಇವನ್ನೆಲ್ಲಾ ಯೋಚಿಸುತ್ತಿದ್ದರೆ, ಶಂಕರಾಚಾರ್ಯರ 'ಬ್ರಹ್ಮಸತ್ಯಂ ಜಗನ್ಮಿಥ್ಯಂ' ಎನ್ನುವ ಹೇಳಿಕೆಯನ್ನು ಕಾರ್ಯರೂಪದಲ್ಲಿ ಅರ್ಥೈಸಿಕೊಳ್ಳಬಹುದಾದ ಹೊಸ್ತಿಲಲ್ಲಿ ನಾವಿದ್ದೇವೆ ಅನ್ನಿಸುತ್ತದೆ.

ಅಂದಹಾಗೆ,

ಪ್ರವಾಹದಿಂದ ಪಾರಾಗಿ ಬಂದ ನಾರದನಿಗಾಗಿ ನನ್ನಲ್ಲಿ ಪ್ರಶ್ನೆಗಳ ಪಟ್ಟಿಯೇ ಇದೆ. 'ಗುಡಿಸಲಿನ ತರುಣಿಯೊಂದಿಗೆ ಸಂಸಾರ ನಡೆಸಿದ್ದು ನೀನೇ ಎಂಬ ಖಾತ್ರಿಯಿದೆಯೇ?' 'ನಿನ್ನ ಸುತ್ತಲಿನದೆಲ್ಲವೂ ನಿನ್ನ ಸೋಕಿಗೆ ಸಿಗುತ್ತಿತ್ತೇ?...' ಇತ್ಯಾದಿ. ಆದರೆ, ನಾರದನೇ ಎದುರು ಬಂದರೆ ಈ ಪ್ರಶ್ನೆಗಳನ್ನು ಕೇಳುವ ಧೈರ್ಯ ಇಲ್ಲ ನನಗೆ; ಆತ ಹೌದೆಂದುಬಿಟ್ಟರೆ!